# ಮಣ್ಣಿನಲ್ಲೊಂದು ಮನೆಯ ಮಾಡಿ..

**ಇಲ್ಲೊಂದು ಸಂಪೂರ್ಣ ಸ್ವಾವಲಂಬಿ ಮನೆಯಿದೆ. ಪಾಲಿಕೆಯ ಗಾಡಿ ಬಂದರೆ ಇವರು ಒಂದಿಷ್ಟೂ ಕಸ ಹಾಕುವುದಿಲ್ಲ. ಎಲ್ಲವನ್ನೂ ತಾವೇ ಇಂಧನ ಮತ್ತು ಗೊಬ್ಬರಕ್ಕೆ ಬಳಸುತ್ತಾರೆ!**

ಚಿತ್ರ– ಲೇಖನ: **ಮಂಜುಳಾ ರಾಜ್**

ಬೆಂಗಳೂರಿನ ಎಚ್‌ಎಸ್‌ಆರ್ ಲೇ ಔಟ್ ನಿವಾಸಿ ಪ್ರದೀಪ್ ಕೃಷ್ಣಮೂರ್ತಿಯವರ ಮನೆಯಲ್ಲಿ ಕಸದವನಿಗಾಗಿ ಕಾಯುವುದಿಲ್ಲ. ಮನೆಯಲ್ಲಿ ಸಂಗ್ರಹವಾದ ಕಸದಿಂದ ಏನು ಮಾಡುತ್ತಾರೆ ಗೊತ್ತಾ? ಅಡುಗೆ ಮನೆಯ ಅನಿಲ, ಗಿಡಗಳಿಗೆ ಗೊಬ್ಬರ ಎಲ್ಲವೂ ಅದರಿಂದಲೇ ಆಗುತ್ತದೆ!

ಇಷ್ಟೇ ಅಲ್ಲ ಇವರ ಮನೆಯ ವೈಶಿಷ್ಟ್ಯಗಳು ಇನ್ನೂ ಹಲವಾರಿವೆ.

## ನೈಸರ್ಗಿಕ ಏರ್‌ಕಂಡಿಷನ್

ಮನೆ ಕಟುವ ಸ್ಥಳದಲ್ಲೇ ಮಣ್ಣಿನಿಂದ (ಮಣ್ಣು, ಮರಳು, ಸುಣ್ಣ ಮತ್ತು 5 ಪರ್ಸೆಂಟ್ ಸಿಮೆಂಟು)15 ಸಾವಿರ ಇಟ್ಟಿಗೆಗಳನ್ನು ಮಾಡಿಸಿ ಅದನ್ನು ನೈಸರ್ಗಿಕವಾಗಿ ಸೂರ್ಯನ ಶಾಖದಲ್ಲಿ ಒಣಗಿಸಿ ಕಟ್ಟಿದ ಮನೆಗಳು ಅಪರೂಪವೇ. ಇಂಥ ಸಾಹಸವನ್ನು ಪ್ರದೀಪ್ ಕೃಷ್ಣಮೂರ್ತಿಯವರ ತಮ್ಮ ಮನೆಯಲ್ಲಿಯೇ ಮಾಡಿದ್ದಾರೆ. ಇವರ ಮನೆ ಎಲ್ಲ ರೀತಿಯ ಪರಿಸರಸ್ನೇಹಿ ತತ್ವಗಳನ್ನು ಅಳವಡಿಸಿಕೊಂಡಿದೆ. ಇಟ್ಟಿಗೆಗಳನ್ನು ಸೂರ್ಯನ ಶಾಖದಲ್ಲೇ ಒಣಗಿಸುವುದರಿಂದ ಇಟ್ಟಿಗೆಯನ್ನು ಸುಡಲು ಸಾಮಾನ್ಯವಾಗಿ ಬಳಸಲಾಗುವ ಸೌದೆ ಮತ್ತು ಇಂಧನವನ್ನು ಇಲ್ಲಿ ಬಳಸಿಲ್ಲ . ಎಲ್ಲವೂ ನೈಸರ್ಗಿಕವಾದ್ದರಿಂದ ಮನೆಯ ಹೊರಗೆ ಸುಡು ಬಿಸಿಲಿದ್ದಾಗ ಮನೆಯ ಒಳಗಡೆ ತಂಪಾಗಿರುತ್ತದೆ ಮತ್ತು ಹೊರಗೆ ತಣ್ಣಗಿದ್ದಾಗ ಮನೆಯ ಒಳಗೆ ಬೆಚ್ಚಗಿರುತ್ತದೆ. ಒಂದು ರೀತಿಯಲ್ಲಿ ಇದು ನೈಸರ್ಗಿಕ ಏರ್‌ಕಂಡಿಷನ್ ಎನ್ನಬಹುದು.

## ಓಪನ್ ಬ್ರಿಕ್ಸ್-

ಮಣ್ಣಿನ ಇಟ್ಟಿಗೆ ಬಳಸಿ ಕಟ್ಟಿದ ಗೋಡೆಗಳಿಗೆ ಯಾವುದೇ ಪ್ಲಾಸ್ಟರಿಂಗ್ ಇಲ್ಲ. ತೆರೆದ ಇಟ್ಟಿಗೆಗಳಿಗೆ (ಓಪನ್ ಬ್ರಿಕ್ಸ್) ಇತರ ಮನೆಗಳಿಗೆ ಹೋಲಿಸಿದರೆ ಬಳಸುವ ಸಿಮೆಂಟಿನ ಪ್ರಮಾಣದಲ್ಲಿ ಶೇಕಡಾ 10ರಿಂದ 15 ಅಷ್ಟೇ ಬಳಕೆಯಾಗುತ್ತದೆ. ಎರಡು ಇಟ್ಟಿಗೆಗಳ ಮಧ್ಯದಲ್ಲೂ ಸಿಮೆಂಟನ್ನು ಬಳಸಿಲ್ಲ. ಬದಲಾಗಿ ಇಟ್ಟಿಗೆ ಮಾಡಲು ಬಳಸಿದ ವಸ್ತುಗಳನ್ನೇ ಸ್ವಲ್ಪ ನೀರಾಗಿ ಕಲಸಿಕೊಂಡು ಉಪಯೋಗಿಸಲಾಗಿದೆ. ಸೂರನ್ನು ಪ್ಲಾಸ್ಟರ್ ಮಾಡಿಲ್ಲ. ಹೀಗಾಗಿ ಅಲ್ಲಿಯೂ ಸಿಮೆಂಟಿನ ಬಳಕೆ ಕಡಿಮೆಯಾಗಿದೆ. ಮನೆಯ ಕಾಂಪೌಂಡ್, ತಳಪಾಯಕ್ಕೂ ಮಣ್ಣಿನ ದೊಡ್ಡ ಅಚ್ಚುಗಳನ್ನು ಮೌಲ್ಡ್ ಮಾಡಿ ಬಳಸಲಾಗಿದೆ. ಕಾಂಕ್ರೀಟನ್ನು ಬಳಸುವಂತೆ ಮಣ್ಣನ್ನು ಬಳಸಿದ್ದರಿಂದ ಮನೆಯೊಳಗೆ ಬಿಸಿಯಾಗುವುದಿಲ್ಲ.

ಮನೆ ಕಟ್ಟುವಾಗ ಚಾವಣಿಗೆ ಹೆಚ್ಚಿನ ಪ್ರಮಾಣದಲ್ಲಿ ಕಾಂಕ್ರೀಟ್ ಬಳಸುತ್ತಾರೆ. ಈ ಮನೆಯಲ್ಲಿ ಅದಕ್ಕೆ ಬದಲಾಗಿ ಮಂಗಳೂರು ಹೆಂಚು, ಮಡಿಕೆಗಳನ್ನು ದಬ್ಬಿ ಹಾಕಿ ಬಳಸಲಾಗಿದೆ. ಮಡಿಕೆ ಬಳಸಿದ್ದು ಆಕರ್ಷಕವಾಗಿದೆ. ಸಾಮಾನ್ಯವಾಗಿ ಬೇರೆಲ್ಲಾ ಮನೆಗಳಲ್ಲಿ ಗೋಡೆಯ ಪಕ್ಕ ಆರು ಇಂಚಿನಷ್ಟು ಕಾಂಕ್ರೀಟ್ ಹಾಕುತ್ತಾರೆ. ಅಲ್ಲಿಗೆ ಹೆಂಚುಗಳನ್ನು ಬಳಸಬಹುದು ಅಥವಾ ಆ ಸ್ಥಳವನ್ನು ಚಂದ ಕಾಣುವ ದೃಷ್ಟಿಯಿಂದ ಮಡಿಕೆಗಳನ್ನು ಉಲ್ಟಾ ಇರಿಸಬಹುದು. ಪಿಲ್ಲರ್‌ಗೆ ಕಾಂಕ್ರೀಟ್ ಕಂಬಗಳ ಬದಲು ಕಬ್ಬಿಣದ ಕಂಬಗಳನ್ನು ಇರಿಸಲಾಗಿದೆ.

## ಎತ್ತರದ ಬಾಗಿಲು, ಕಿಟಕಿ

ಸಾಮಾನ್ಯವಾಗಿ ಮನೆಯ ಬಾಗಿಲುಗಳು ಆರೂವರೆಯಿಂದ ಏಳು ಅಡಿಗಳಷ್ಟಿರುತ್ತದೆ. ಇಲ್ಲಿ ಬಾಗಿಲುಗಳನ್ನು ಎಂಟು ಅಡಿ ಮಾಡಲಾಗಿದೆ. ಕಿಟಕಿಗಳು ಏಳು ಅಡಿ. ಇಲ್ಲೂ ಸಿಮೆಂಟಿನ ಉಳಿತಾಯವಾಗುವುದರ ಜೊತೆಗೆ, ಗಾಳಿ ಬೆಳಕೂ ಬೇಕಾದಷ್ಟು ಬರುತ್ತದೆ. ಒಟ್ಟಾರೆ ಬೇರೆ ಮನೆಗಳಲ್ಲಿ ಬಳಸುವ ಸಿಮೆಂಟಿನಲ್ಲಿ ಕೇವಲ ಶೇಕಡಾ 5ರಷ್ಟು ಸಿಮೆಂಟ್ ಮಾತ್ರ ಬಳಕೆಯಾಗಿದೆ. ಇದರಿಂದ ಖರ್ಚು ಕಡಿಮೆ, ಜೊತೆಗೆ ಸಾಧ್ಯವಾದಷ್ಟು ನೈಸರ್ಗಿಕ ಉತ್ಪನ್ನಗಳನ್ನು ಬಳಸಿದ ತೃಪ್ತಿ. ಗಾಳಿ ಮತ್ತು ಬೆಳಕಿಗಾಗಿ ಬೆಳಗಿನ ಹೊತ್ತು ಕರೆಂಟ್ ಸ್ವಿಚ್ ಹಾಕಬೇಕಿಲ್ಲ. ನೈಸರ್ಗಿಕ ಬೆಳಕೇ ಬೇಕಾದಷ್ಟಿದೆ. ಮೆಟ್ಟಲುಗಳಿಗೆ ಮತ್ತು ಕುಳಿತುಕೊಳ್ಳುವ ಬೆಂಚುಗಳಿಗೆ ಸ್ಥಳೀಯ ಕಲ್ಲು ಚಪ್ಪಡಿ ಉಪಯೋಗಿಸಿದ್ದಾರೆ.

ಪಾಲಿಕೆಗೆ ಕಸವಿಲ್ಲ: ಮೇಲೆ ಮತ್ತು ಕೆಳಗಿನ ಮನೆಯ ಅಡುಗೆ ಮನೆಯ ತ್ಯಾಜ್ಯ ಮತ್ತು ಗಿಡಗಳ ಮಿಕ್ಕ ತೇವದ ತ್ಯಾಜ್ಯವನ್ನು ತಾರಸಿಯಲ್ಲಿ ಅಳವಡಿಸಿರುವ ಡೊಮೆಸ್ಟಿಕ್ ಬಯೋ ಗ್ಯಾಸ್ ಪ್ಲಾಂಟ್ ಅರ್ಥಾತ್ ದೇಶೀಯ ಜೈವಿಕ ಅನಿಲ ಸ್ಥಾವರಕ್ಕೆ ಹಾಕುತ್ತಾರೆ. ಅದರ ಮೂಲಕ ಈ ಮನೆಗೆ ಪೂರ್ಣವಾಗಿ ಅಡುಗೆ ಅನಿಲದ ಪೂರೈಕೆಯಾಗುತ್ತದೆ. ಇವರ ಮನೆಯಲ್ಲಿ ಒಂದೇ ಎಲ್‌ಪಿಜಿ ಸಿಲಿಂಡರ್ ಆರರಿಂದ ಎಂಟು ತಿಂಗಳು ಬಾಳಿಕೆ ಬರುತ್ತದೆ. 'ನಾವು ಬಿಬಿಎಂಪಿ ಗೆ ಯಾವುದೇ ಕಸವನ್ನು ಕೊಡುವುದಿಲ್ಲ' ಎಂದು ನಗುತ್ತಾರೆ ಮನೆಯೊಡೆಯ ಪ್ರದೀಪ್.

ನೀರಿನ ಮರು ಬಳಕೆ: ಟಾಯ್ಲೆಟ್‌ನಲ್ಲಿ ಫ್ಲಶ್ ಮಾಡುವ ನೀರನ್ನು ಹೊರತುಪಡಿಸಿ ಪ್ರತಿಯೊಂದು ಹನಿ ನೀರನ್ನೂ ಈ ಮನೆಯಲ್ಲಿ ಮರು ಬಳಕೆ ಮಾಡಲಾಗುತ್ತದೆ. 'ರಿಸೈಕಲ್ ಮಾಡಿದ ನೀರನ್ನು ಟಾಯ್ಲೆಟ್ ಫ್ಲಶ್ ಮಾಡಲು ಮತ್ತು ಮನೆಯ ಮುಂದಿನ ತೋಟಕ್ಕೆ ಬಳಸುತ್ತೇವೆ. 1998ರಲ್ಲಿ ಕಟ್ಟಿದ 15 ಅಡಿ ಅಗಲದ ಬಾವಿಯನ್ನು ಈಗಲೂ ಇಟ್ಟುಕೊಂಡಿದ್ದೇವೆ. ಮಳೆ ನೀರು ಕೊಯಿಲನ್ನು ಅಳವಡಿಸಿದ್ದೇವೆ. ಬೋರ್‌ವೆಲ್‌ನ ಆಳ 140 ಅಡಿಗಳಷ್ಟೇ ಇದೆ. ನಮ್ಮ ಎದುರು ಮನೆಯಲ್ಲಿ ಬೋರ್‌ವೆಲ್‌ಗಾಗಿ 600 ರಿಂದ 800 ಅಡಿಗಳಷ್ಟು ಭೂಮಿ ಕೊರೆದಿದ್ದಾರೆ. ಪ್ರತಿಯೊಂದು ಮನೆಯವರು ರೈನ್ ವಾಟರ್ ಹಾರ್ವೆಸ್ಟ್ ಮಾಡಿ ನೀರನ್ನು ಮಿತವಾಗಿ ಬಳಸಿದಲ್ಲಿ ಭೂಮಿಯಲ್ಲಿನ ತೇವಾಂಶ ಹೆಚ್ಚಾಗಿ ವಾಟರ್ ಟೇಬಲ್ ಮೇಲೇರುತ್ತದೆ' ಎನ್ನುವುದು ಪ್ರದೀಪ್ ಅವರ ವಿವರಣೆ.

ಭೂಮಿ ಕುಟುಂಬ






